# ಎರಿಕ್ ಸೆಲಿಗ್ಮನ್ ಫ್ರಾಂ (1900-1980)

## ಇಂದಿರಾ ಜೈಪ್ರಕಾಶ್



***

ಫ್ರಾಂ ನವಫ್ರಾಯಡ್ ಪಂಥೀಯರಲ್ಲಿ ಒಬ್ಬನು. ಫ್ರಾಯ್ಡನ ವಿಚಾರಗಳಲ್ಲಿ ಕೆಲವನ್ನು ಮಾತ್ರ ಒಪ್ಪಿಕೊಂಡು ಮಾನವ ವರ್ತನೆಯ ಬಗ್ಗೆ ತನ್ನದೇ ಸಿದ್ಧಾಂತವನ್ನು ಮಂಡಿಸಿದವನು. ಇವನು ಸಂಪ್ರದಾಯಸ್ಥ ಯಹೂದಿ ದಂಪತಿಗಳ ಒಬ್ಬನೇ ಮಗನಾಗಿ ಜರ್ಮನಿಯ ಫ್ರಾಂಕ್‌ಫರ್ಟ್ನಲ್ಲಿ 1900ರಲ್ಲಿ ಜನಿಸಿದ. ಫ್ರಾಂ ಹುಟ್ಟುವ ವೇಳೆಗೆ ಅಲ್ಲಿ ಯಹೂದಿಗಳ ವಿರುದ್ಧ ದ್ವೇಷ ಮತ್ತು ಅವರ ಶೋಷಣೆ ಪ್ರಾರಂಭವಾಗಿತ್ತು. ಅವನ ಹದಿಹರೆಯ ಪ್ರಥಮ ವಿಶ್ವ ಮಹಾಸಮರದ ಕಾಳಛಾಯೆಯಲ್ಲಿ ಕಳೆಯಿತು. ಇವನು ಪದವಿ ಗಳಿಸಿದ್ದು ಸಮಾಜವಿಜ್ಞಾನದಲ್ಲಿ, ಆದರೆ ಮನೋವಿಶ್ಲೇಷಣೆಯಲ್ಲಿ ಆಸಕ್ತನಾಗಿ ಫ್ರಾಂಕ್‌ಫರ್ಟ್ ಮತ್ತು ಬರ್ಲಿನ್‌ನಲ್ಲಿ ತರಬೇತಿ ಪಡೆದ. ಕಾರ್ಲ್ ಮಾರ್ಕ್ಸ್ ನ ಕೃತಿಗಳನ್ನು ಓದಿ ಅವುಗಳಿಂದ ಪ್ರಭಾವಿತನಾಗಿದ್ದ. ಜರ್ಮನಿಯನ್ನು ನಾಜಿಗಳು ವಶಪಡಿಸಿಕೊಂಡಾಗ ಜೀವ ಉಳಿಸಿಕೊಳ್ಳಲು ದೇಶ ಬಿಟ್ಟು ಕೆಲಕಾಲ ಜಿನಿವಾದಲ್ಲಿದ್ದು ನಂತರ 1933-34 ರಲ್ಲಿ ನ್ಯೂಯಾರ್ಕ್ ನಗರಕ್ಕೆ ಬಂದು ನೆಲೆಸಿದ. ಅಲ್ಲಿ ಹಾರ್ನ್ಯೆ, ಸಲ್ಲಿವಾನ್ ಮುಂತಾದವರ ಸಂಪರ್ಕವೂ ಬೆಳೆದು ವಿಲಿಯಂ ಅಲಾನ್ಸನ್ ವೈಟ್ ಸಂಸ್ಥೆಯನ್ನು ಸ್ಥಾಪಿಸುವಲ್ಲಿ ನೆರವಾದ. ಇವನು 1941 ರಲ್ಲಿ ಬರೆದ 'ಎಸ್ಕೇಪ್ ಫ್ರಂ ಫ್ರೀಡಂ (Escape from Freedom)' ರಾಜಕೀಯ ಮನೋವಿಜ್ಞಾನದ (Political Psychology) ಮೊದಲ ಕೃತಿ ಎನಿಸಿದೆ. ನಾಜಿಗಳ ವಿನಾಶಕಾರಿ ಶಕ್ತಿಯನ್ನು ಅನುಭವಿಸಿದವನಿಗೆ ರಾಜಕಾರಣ, ಯುದ್ಧ ಮತ್ತು ಜನರೇಕೆ ತಮ್ಮ ನಾಯಕರನ್ನು ವಿನಾಶದತ್ತ ಹಿಂಬಾಲಿಸುತ್ತಾರೆ ಎಂಬ ವಿಷಯಗಳು ಅಧ್ಯಯನದ ವಿಷಯಗಳಾದವು.

ಇವನ ಪ್ರಕಾರ ಮಾನವ ಇಂದು ಪ್ರಕೃತಿ ಮತ್ತು ಇತರರಿಂದ ಬೇರ್ಪಟ್ಟಿದ್ದಾನೆ. ಹೆಚ್ಚು ಸ್ವತಂತ್ರನಾದಂತೆ, ಹೆಚ್ಚು ಏಕಾಂಗಿಯೂ ಆಗುತ್ತಿದ್ದಾನೆ. ಇಂತಹ 'ಸ್ವಾತಂತ್ರ್ಯ(freedom)'ದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ನಮ್ಮ ಸಂಕಲ್ಪಶಕ್ತಿಯ ಸ್ವಾತಂತ್ರ್ಯವನ್ನು ಸ್ವೀಕರಿಸುವುದು ಆರೋಗ್ಯಕರ ವರ್ತನೆ, ಅದರಿಂದ ತಪ್ಪಿಸಿಕೊಳ್ಳಲು ತಂತ್ರಗಳನ್ನು ಹುಡುಕುವುದು ಮಾನಸಿಕ ಘರ್ಷಣೆಗೆ ಕಾರಣ. ಮಾನವನಿಗೆ ಐದು ರೀತಿಯ ಅಗತ್ಯಗಳಿವೆ. ಅವು-

ಬೇರೆಯವರೊಡನೆ ಸಂಬಂಧ ಬೆಳಸುವ; ತನ್ನಲ್ಲಿರುವ ಪ್ರಾಣಿಗುಣಗಳನ್ನು ಮೀರಿ ಅತೀತನಾಗುವ; ಪ್ರಪಂಚದಲ್ಲಿ ನೆಲೆಯೂರಿ ಅದರ ಅವಿಭಾಜ್ಯ ಅಂಗವಾಗುವ; ತನ್ನ ಅನನ್ಯತೆಯನ್ನು ಅರಿತುಕೊಳ್ಳುವ; ಮತ್ತು ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಸ್ಥಿರವಾದ ನಿರ್ದೇಶನಗಳ-ಅಗತ್ಯಗಳು.

ಸ್ವಾತಂತ್ರ್ಯದಿಂದ ತಪ್ಪಿಸಿಕೊಳ್ಳಲು ಮಾನವ ಕೆಲವು ತಂತ್ರಗಳನ್ನು ಬಳಸುತ್ತಾನೆ. ಫ್ರಾಂ ಇಂತಹ ಮೂರು ತಂತ್ರಗಳನ್ನು ವರ್ಣಿಸಿದ್ದಾನೆ. ಇಂತಹ 'ಪಾರಾಗುವ ತಂತ್ರ'ಗಳಲ್ಲಿ ಒಂದು ಯಾಂತ್ರಿಕ ಅನುವರ್ತನೆ (Automation conformity-ತಮ್ಮ ಆದರ್ಶಗಳನ್ನು ಸಮಾಜದ ಇಚ್ಛೆಯಂತೆ ಬದಲಿಸುವುದು); ಎರಡನೆಯದು ಸರ್ವಾಧಿಕಾರತ್ವ (Authoritarianism-ಬೇರೆಯವರ ವಶಕ್ಕೆ ಒಪ್ಪಿಸಿಕೊಂಡು ಆಯ್ಕೆಯ ಸ್ವಾತಂತ್ರ್ಯವನ್ನು ಬಿಟ್ಟುಕೊಡುವುದು); ಮತ್ತು ಮೂರನೆಯದು ವಿನಾಶಕಾರಕ ತಂತ್ರ (Destructiveness-ಬೇರೆಯವರನ್ನು ನಿರ್ಮೂಲ ಮಾಡುವುದು). ತನ್ನ ಸುತ್ತಲೂ ನಡೆಯುತ್ತಿದ್ದ ಮಾರಣಹೋಮಕ್ಕೆ ಉತ್ತರಗಳನ್ನು ಈ ಸಂಕಲ್ಪನೆಗಳ ಮೂಲಕ ಫ್ರಾಂ ಹುಡುಕಿದ.

'ಕ್ಯಾರಕ್ಟರ್ ಟೈಪ್ (Character type)' ಎನ್ನುವುದು ಇವನ ಇನ್ನೊಂದು ಮುಖ್ಯ ಸಂಕಲ್ಪನೆ. ನಾವು ನಮ್ಮ ಸ್ವ-ಇಚ್ಛೆಯಿಂದ ವರ್ತಿಸುತ್ತಿದ್ದೇವೆ ಎಂದು ಭಾವಿಸಿದರೂ ಸಮಾಜದ ಆಜ್ಞೆಗಳನ್ನು ಅರಿವಿಲ್ಲದೆಯೇ ಪಾಲಿಸುತ್ತಿರುತ್ತೇವೆ. ಇದನ್ನು 'ಸಾಮಾಜಿಕ ಸುಪ್ತಚೇತನ' ಎನ್ನಬಹುದು. ವ್ಯಕ್ತಿತ್ವ ನಮ್ಮ ಅಗತ್ಯಗಳು ಮತ್ತು ಸಮಾಜದ ಒತ್ತಾಯಗಳ ನಡುವಿನ ಒಪ್ಪಂದ. ಸಮಾಜಕ್ಕೆ ಬಗ್ಗಿ ಅದಕ್ಕೆ ಹೊಂದಿಕೊಳ್ಳಲು ನಾವು ಐದು ರೀತಿಯ ಸಾಮಾಜಿಕ ಸ್ವಭಾವಗಳನ್ನು (Social Character type) ಬೆಳೆಸಿಕೊಳ್ಳುತ್ತೇವೆ. ಅವು- ಗ್ರಹಿಸುವ, ದುರುಪಯೋಗ ಪಡೆಯುವ, ಗಂಟುಮಾಡುವ, ವ್ಯಾಪಾರೀ ಮತ್ತು ಉತ್ಪಾದಕ ಸ್ವಭಾವ. 1964 ರಲ್ಲಿ ಜೀವನವನ್ನು ಪ್ರೀತಿಸುವ (Biophilis) ಮತ್ತು ಸಾವನ್ನು ಪ್ರೀತಿಸುವ (Necrophilis) ಸ್ವಭಾವಗಳನ್ನು ಸೇರಿಸಿದನು. ಇದರಲ್ಲಿ ನಾವು ಫ್ರಾಯ್ಡ್ ನೀಡಿದ್ದ ಎರೋಸ್ ಮತ್ತು ಥನಟಾಸ್ (Eros and Thanatos) ಎಂಬ ಸಂಕಲ್ಪನೆಗಳಿಗೆ ಸಾಮ್ಯತೆ ಕಾಣಬಹುದು. ಹೀಗೆ ಇವನು ಫ್ರಾಯ್ಡನನ್ನು ವಿರೋಧಿಸಿದ್ದರೂ ಅವನ ಪ್ರಭಾವವನ್ನು ತಪ್ಪಿಸಿಕೊಳ್ಳಲಾಗಿರಲಿಲ್ಲ. ಆದರೆ ವರ್ತನೆಯ ಸಾಮಾಜಿಕ- ಸಾಂಸ್ಕೃತಿಕ ಪ್ರಭಾವಗಳಿಗೆ ಒತ್ತು ನೀಡಿ ಫ್ರಾಯ್ಡನ ಲೈಂಗಿಕ ಸಿದ್ಧಾಂತವನ್ನು ತಳ್ಳಿಹಾಕಿದ್ದ. **ಸಮಾಜಸ್ವಾಮ್ಯವಾದ** ಎಂಬ ಆದರ್ಶ ಪ್ರತಿಪಾದಿಸಿ, ಉತ್ಪಾದಕ ಸ್ವಭಾವದಿಂದ ಸಮಾಜದಲ್ಲಿ ಪ್ರತಿಯೊಬ್ಬನೂ ಸಂಪೂರ್ಣ ಮಾನವನಾಗಬಲ್ಲ ಎಂದು ವಾದಿಸಿದ್ದ

ಫ್ರಾಂ ಫ್ರೈಡಾ ರೀಕ್‌ಮನ್ ಬಳಿ ಮನೋವಿಶ್ಲೇಷಣೆಯ ತರಬೇತಿ ಪಡೆಯುತ್ತಿದ್ದ. ಇವರಿಬ್ಬರೂ 1926ರಲ್ಲಿ ವಿವಾಹವಾಗಿದ್ದು, ಅದು ನಾಲ್ಕು ವರ್ಷಗಳಲ್ಲಿ ಮುರಿದು ಬಿತ್ತು. 1944 ರಲ್ಲಿ ಅಮೆರಿಕೆಯ ನಾಗರಿಕನಾಗಿ ಹೆನ್ನಿ ಗುಲಾಂಡ್ ಎನ್ನುವವಳನ್ನು ಮದುವೆಯಾಗಿದ್ದ. ಅವಳ ಆರೋಗ್ಯ ಸುಧಾರಣೆಗೆಂದು ಮೆಕ್ಸಿಕೋಗೆ ಹೋಗಿ ನೆಲಸಿದ್ದ. ಅಲ್ಲಿಯೇ 1965 ರ ವರೆಗೂ ತನ್ನ ಕೆಲಸ ಮುಂದುವರಿಸಿದ್ದ. ಹೆನ್ನಿಯ ಸಾವಿನ ನಂತರ 1953 ರಲ್ಲಿ ಮತ್ತೆ ವಿವಾಹವಾಗಿದ್ದ. 1974 ರಲ್ಲಿ ಸ್ವಿಟ್ಜರ್ಲೆಂಡ್‌ಗೆ ಬಂದು 1980 ರಲ್ಲಿ ಮರಣಹೊಂದುವವರೆಗೂ ಅಲ್ಲಿಯೇ ನೆಲೆಸಿದ್ದ. ಇವನ 'ಸೇನ್ ಸೊಸೈಟಿ (Sane Society)' ಭವಿಷ್ಯದ ಆರೋಗ್ಯಕರ ಸಮಾಜದ ಆದರ್ಶ ಚಿತ್ರಣ ನೀಡುತ್ತದೆ. ಇವನ ಮತ್ತೊಂದು ಕೃತಿ 'ದಿ ಆರ್ಟ್ ಆಫ್ ಲವಿಂಗ್ (The Art of Loving)' ಅತ್ಯಂತ ಜನಪ್ರಿಯ ಪುಸ್ತಕವಾಯಿತು.

***